(ಇಂದು ದಿನಾಂಕ:09-09-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

ಪಾಟೀಸವಾಲು: ಶ್ರಿ ಎಮ್ ಎ ಜಿ ವಾದಿಯರ ಪರ ವಕೀಲರಿಂದ:

1. ನಿಡಿ-6 ಮೃತ್ಯು ಪತ್ರವನ್ನು ನಾನು ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ನಾನು ಸಾಕ್ಷಿ ಕೊಡಲು ಬಂದಾಗಲೇ ನೋಡಿದ್ದೇನೆ ಎಂದರೆ ಸರಿ. ನನ್ನ ತಂದೆಯವರು ತೀರಿಕೊಂಡ ದಿನಾಂಕ ನನಗೆ ಗೊತ್ತಿಲ್ಲ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನನ್ನ ತಂದೆ ಮರಣ ಹೊಂದಿಲ್ಲ, ಆದರೂ ಕೂಡಾ ಮರಣ ಹೊಂದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ನನ್ನ ತಂದೆ ಅಬ್ದುಲ್ ಖದೀರ್ ರವರ ಮಗ ಅಂತಾ ತೋರಿಸಲು ವಂಶಾವಳಿ ಮತ್ತು ಆಧಾರ ಕಾರ್ಡ್ ನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

2. ನಿಡಿ-6 ಮೃತ್ಯು ಪತ್ರದಲ್ಲಿನ ಉಳಿದ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ನಿಡಿ-6 ಮೃತ್ಯು ಪತ್ರದಲ್ಲಿನ ಸಹಿ ಮಾತ್ರ ಗೊತ್ತು ಎಂದರೆ ಸರಿ. ನಿಡಿ-6 ಮೃತ್ಯು ಪತ್ರವನ್ನು ಯಾರು ಬರೆದಿದ್ದಾರೆ, ಎಷ್ಟು ಬೆಲೆಯ ಛಾಪಾ ಕಾಗದದ ಮೇಲೆ ಬರೆದಿದ್ದಾರೆ, ಆ ವೇಳೆಯಲ್ಲಿ ಯಾರು ಯಾರು ಇದ್ದರು ಮತ್ತು ಯಾವ ಆಸ್ತಿಗೆ ಸಂಬಂಧಪಟ್ಟಂತೆ ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ವಯಸ್ಸು 43 ಇದ್ದರೂ ನನಗೆ 53 ವರ್ಷ ವಯಸ್ಸು ಅಂತಾ ತಪ್ಪು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-6 ಮೃತ್ಯು ಪತ್ರದ ಬಗ್ಗೆ ನನ್ನ ತಂದೆಯವರು ನನ್ನ ಜೊತೆ ಎಂದಿಗೂ ಚರ್ಚಿಸಿಲ್ಲ ಎಂದರೆ ಸರಿ. ಅದರಲ್ಲಿಯ ಸಹಿ ಮಾತ್ರ ನನಗೆ ಗೊತ್ತು. ನನ್ನ ತಂದೆರವರು ಕೆಲವೊಂದು ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಮತ್ತು ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಾನು ಕೈಬರಹ ತಜ್ಞನಲ್ಲ ಎಂದರೆ ಸರಿ. ನನ್ನ ತಂದೆಯವರು ಸಾಯುವ ಪೂರ್ವದಲ್ಲಿ ಎಷ್ಟು ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎನ್ನುವ ಬಗ್ಗೆ ಯಾವುದೇ ದಾಖಲೆ ಮೇಲೆ ಬರೆದಿಲ್ಲ.

3. ನನ್ನ ತಂದೆ ಬಕರಸಾಬರವರು ಬೀಗರಾಗಬೇಕು. ನನಗೆ ಸಾಕ್ಷಿ ನುಡಿಯಲು ವಕೀಲರು ಫೋನ್ ಮಾಡಿದ್ದರು. ಪ್ರತಿವಾದಿಯರು ನನಗೆ ಸಾಕ್ಷಿ ನುಡಿಯಲು ಹೇಳಿಲ್ಲ. ನ್ಯಾಯಾಲಯದಿಂದ ನನಗೆ ಯಾವುದೇ ನೋಟೀಸ್ ಬಂದಿಲ್ಲ. ನನಗೆ ಸಾಧಿಕ್ ಮಿಯಾರವರು ಗೊತ್ತಿಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಡಿ-6 ಮೃತ್ಯು ಪತ್ರದಲ್ಲಿ ನನ್ನ ತಂದೆ ಸಹಿ ಇರದೇ ಇದ್ದರೂ ಕೂಡಾ ನಾನು ಅವರ ಸಹಿ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಧಿಕ್ ಬೇಗಂರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಸಹಿ ನನಗೆ ಗೊತ್ತು ಅಂತಾ ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಿಡಿ-6 ಮೃತ್ಯು ಪತ್ರದಲ್ಲಿ ನನ್ನ ತಂದೆಯವರ ಸಹಿ ಇದೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಿಡಿ-6 ಮೃತ್ಯು ಪತ್ರದಲ್ಲಿ ನನ್ನ ತಂದೆ ಸಹಿ ಮಾಡಿದ್ದಾರೆ ಅಂತಾ ಬರೆಯಲಾಗಿದೆ. ದಾವೆಯು ಯಾರ ಮೇಲೆ ಮತ್ತು ಎಷ್ಟು ಜನರ ಮೇಲೆ ಹಾಕಿರುತ್ತಾರೆ ಎಂದರೆ, ದಾವೆಯನ್ನು 4-5 ಜನರ ಮೇಲೆ ಹೂಡಿರುತ್ತಾರೆ, ಆದರೆ ಯಾರು ದಾವೆ ಹಾಕಿರುತ್ತಾರೆ ಮತ್ತು ಯಾರ ಮೇಲೆ ಹಾಕಿರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ.

5. ನಾನು ಮೂಲತಃ ಗಂಗಾವತಿ ನಗರದ ನಿವಾಸಿ ಇರುತ್ತೇನೆ. ಅದು ಇಲ್ಲಿಂದ 50 ಕಿಮಿ ಅಂತರದಲ್ಲಿದೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು